ESI.A.No. 77/2018

RW–1,

ದಿನಾಂಕಃ 19–06–2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ– ಅರ್ಜಿದಾರರ ಪರವಾಗಿಃ ಶ್ರೀ. ಕೆ.ಸಿ.ಕಾಳಿಂಗಪ್ಪ ವಕೀಲರಿಂದಃ

1) ವಾಣಿ ವಿಲಾಸ ವಾಟರ್ ಸಪ್ಲೈ ಬೋರ್ಡ್ ಮೈಸೂರು ಮಹಾನಗರ ಪಾಲಿಕೆಯ ಆಡಳಿತಕ್ಕೆ ಒಳಪಟ್ಟಿರುತ್ತದೆ ಎಂದರೆ ಸರಿ . ಮೈಸೂರು ಮಹಾನಗರ ಪಾಲಿಕೆಯ ಮುಖ್ಯಸ್ಥರು ಆಯುಕ್ತರು ಎಂದರೆ ಸರಿ . ಮೈಸೂರು ಮಹಾನಗರ ಪಾಲಿಕೆಯ ಆಡಳಿತ ವ್ಯಾಪ್ತಿಗೆ ಒಳಪಡುವ ವಿಷಯಗಳ ಬಗ್ಗೆ ಮಹಾನಗರ ಪಾಲಿಕೆಯ ಆಯುಕ್ತರು ಮುಖ್ಯಸ್ಥರಾಗಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ.

2) ನಿಶಾನೆ ಆರ್ –9 ಎದುರುದಾರರ ಇಲಾಖೆಯಿಂದ ಆಗಿರುವ ಆದೇಶವೆಂದರೆ ಸರಿ . ನಿಶಾನೆ ಆರ್ – 2 ರಿಂದ 8 ದಾಖಲೆಗಳನ್ನು ನೋಡಿ ನಿಶಾನೆ ಆರ್– 9 ರಂತೆ ಆದೇಶ ಮಾಡಲಾಗಿರುತ್ತದೆ ಎಂದರೆ ಸರಿ . ಆಯುಕ್ತರು ಮಹಾನಗರ ಪಾಲಿಕೆ ಪ್ರಧಾನ ಮಾಲೀಕರು ಎಂದರೆ ನನಗೆ ಮಾಹಿತಿ ಇರುವುದಿಲ್ಲ. ನಿ ಆರ್–9 ರಂತೆ ಆದೇಶವನ್ನು ಮಾಡುವ ಪೂರ್ವದಲ್ಲಿ ಆಯುಕ್ತರು ಮೈಸೂರು ಮಹಾನಗರ ಪಾಲಿಕೆಯರವರಿಗೆ ಯಾವುದೇ ಪತ್ರವನ್ನು ಕಳುಹಿಸಿರುವುದಿಲ್ಲ ಎಂದರೆ ಸರಿ ಸಾಕ್ಷಿದಾರರು ಮುಂದುವರೆದು ವಾಣಿ ವಿಲಾಸ್ ವಾಟರ್ ಸಪ್ಲೈ ಬೋರ್ಡ್ ನವರಿಗೆ ಸೂಚನಾ ಪತ್ರಗಳನ್ನು ಕೊಟ್ಟಿರುತ್ತೇವೆ ಎಂದು ಹೇಳಿದರು .

3) ಪ್ರಶ್ನೆ: 43 ಜನ ಕಾರ್ಮಿಕರು ವಾಣಿ ವಿಲಾಸ್ ವಾಟರ್ ಸಪ್ಲೈ ಬೋರ್ಡ್ ನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಖಾತರಿ ಪಡಿಸಿಕೊಳ್ಳಲು , ವಾಣಿ ವಿಲಾಸ್ ವಾಟರ್ ಸಪ್ಲೈ ಬೋರ್ಡ್ ಕಛೇರಿಯಿಂದ ಯಾವುದಾದರು ದೃಢೀಕೃತ ದಾಖಲೆಯನ್ನು ಪಡೆದುಕೊಂಡಿರುತ್ತಿರೀಯೇ ?

ಉತ್ತರಃ ನಮ್ಮ ಇಲಾಖೆಯ ಎಸ್ ಎಸ್ ಒ ( ಸಾಮಾಜಿಕ ಸುರಕ್ಷ ಅಧಿಕಾರಿ ) ರವರು ವಾಣಿ ವಿಲಾಸ್ ವಾಟರ್ ಸಪ್ಲೈ ಬೋರ್ಡ್ ಗೆ ಭೇಟಿ ಕೊಟ್ಟು ಪರಿಶೀಲಿಸಿದಾಗ 43 ಜನ ಕಾರ್ಮಿಕರ ಮಾಹಿತಿ ದೊರಕಿರುತ್ತದೆ ಮತ್ತು ವಾಣಿ ವಿಲಾಸ್ ವಾಟರ್ ಸಪ್ಲೈ ಬೋರ್ಡ್ ನವರು ಎಸ್ ಎಸ್ ಒ ರವರಿಗೆ ದಾಖಲೆ ಒದಗಿಸಿರುತ್ತಾರೆ, ಸದರಿ ದಾಖಲೆ ನಿಶಾನೆ ಆರ್–2 ಆಗಿರುತ್ತದೆ.

4) ನಿಶಾನೆ ಆರ್–2 ನಮ್ಮ ಇಲಾಖೆಯ ಎಸ್ ಎಸ್ ಒ ರವರ ಪರಿವೀಕ್ಷಣಾ ವರದಿ ಎಂದರೆ ಸರಿ . ನಿಶಾನೆ ಆರ್ –2 ರಲ್ಲಿ ವಾಣಿ ವಿಲಾಸ್ ವಾಟರ್ ಸಪ್ಲೈ ಬೋರ್ಡ್ ರವರು ದಾಖಲೆ ಕೊಟ್ಟಿರುತ್ತಾರೆ ಎಂದು ಉಲ್ಲೇಖವಿರುವುದಿಲ್ಲ ಎಂದರೆ ಸರಿಯಲ್ಲ . ನಿಶಾನೆ ಆರ್ –2 ರಲ್ಲಿ ವಾಣಿ ವಿಲಾಸ್ ವಾಟರ್ ಸಪ್ಲೈ ಬೋರ್ಡ್ ನ ಬಗ್ಗೆ ಮಾಹಿತಿ ಕೊಟ್ಟ , ಸದರಿ ಬೋರ್ಡ್ ನ ಅಧಿಕಾರಿಯ ಸಹಿ ನಿಶಾನೆ ಆರ್–2 ರಲ್ಲಿ ಕಂಡುಬರುತ್ತಿಲ್ಲ. ವಾಣಿ ವಿಲಾಸ್ ವಾಟರ್ ಸಪ್ಲೈ ಬೋರ್ಡ ನ ಕಛೇರಿಗೆ ನಮ್ಮ ಇಲಾಖೆಯ ಎಸ್ ಎಸ್ ಒ ಭೇಟಿ ಕೊಟ್ಟಿರುವುದಿಲ್ಲ ಮತ್ತು ಯಾವುದೇ ಮಾಹಿತಿಯನ್ನು ಸದರಿ ಬೋರ್ಡನ ಅಧಿಕಾರಿಗಳು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ .

5) ಪ್ರಶ್ನೆಃ ನಿಮ್ಮ ಮುಖ್ಯ ವಿಚಾರಣೆಯ ಕಂಡಿಕೆ 2 ರಲ್ಲಿ ವಾಣಿ ವಿಲಾಸ್ ವಾಟರ್ ಸಪ್ಲೈ ಬೋರ್ಡ್ ನ ಕಾರ್ಮಿಕರಿಗೆ ಇ.ಎಸ್. ಐ. ಸೌಲಭ್ಯ ದೊರಕುತ್ತಿಲ್ಲ ಎಂದು ದೂರು ಬಂದಿತ್ತು ಎಂದು ಹೇಳಿರುತ್ತೀರಿ , ಸದರಿ ದೂರನ್ನು ಯಾರು , ಯಾವಾಗ ಎಲ್ಲಿ ಕೊಟ್ಟರು ಎಂಬ ವಿವರಗಳನ್ನು ಹೇಳಿ?
ಉತ್ತರಃ ದೂರು ಶಾಖೆಯಿಂದ ಎಸ್ ಎಸ್ ಒ ರವರಿಗೆ ಮಾಹಿತಿ ಬಂದಿರುತ್ತದೆ ದೂರು ಶಾಖೆಯಿಂದ ಮಾಹಿತಿ ಪಡೆದು ಉತ್ತರ ಹೇಳಬಲ್ಲೆ.

6) ದಿನಾಂಕ 09.10.2017 ರ ಪೂರ್ವದಲ್ಲಿ ನಮ್ಮ ಇಲಾಖೆಯಿಂದ ವಾಣಿ ವಿಲಾಸ್ ವಾಟರ್ ಸಪ್ಲೈ ಬೋರ್ಡ್ ರವರ ಕಛೇರಿಯ ದಾಖಲೆಗಳನ್ನು ಪರಿಶೀಲಿಸಲು ದಿನಾಂಕ ನಿಗದಿ ಪಡಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಪರಿಶೀಲನಾ ದಿನಾಂಕದಂದು ಹಾಜರಿರಲು ಸೂಚಿಸಿ ಪತ್ರವನ್ನು ಕೊಟ್ಟಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು, ದೂರು ಬಂದಾಗ , ಯಾವುದೇ ವ್ಯಾಪಾರ ಸಂಸ್ಥೆಯ ಪರಿಶೀಲನೆಯ ಬಗ್ಗೆ ವ್ಯಾಪಾರಿ ಸಂಸ್ಥೆಗೆ ಮುಂಚಿತವಾಗಿ ತಿಳಿಸಲಾಗುವುದಿಲ್ಲ ಎಂದು ಹೇಳಿದರು. ನಿಶಾನೆ ಆರ್–3 , ನಿಶಾನೆ ಆರ್ –2 ತಯಾರು ಮಾಡುವ ಸಂದರ್ಭದಲ್ಲೇ ಮಾಡಲಾಗಿತ್ತು ಎಂದರೆ ಸರಿ . ನಿಶಾನೆ ಆರ್–3 ರಲ್ಲಿ 33 ಜನರ ಪಟ್ಟಿ / ಹೆಸರುಗಳನ್ನು ಪಟ್ಟಿ ಮಾಡಲಾಗಿದೆ ಎಂದರೆ ಸರಿ .

7) 09.10.2017 ರಂದು ನಮ್ಮ ಇಲಾಖೆಯ ಎಸ್ ಎಸ್ ಒ ರವರು ವಾಣಿ ವಿಲಾಸ್ ವಾಟರ್ ಸಪ್ಲೈ ಬೋರ್ಡ್ ನ ಕಛೇರಿ / ಕಾರ್ಯ ಸ್ಥಳಕ್ಕೆ ಭೇಟಿ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ . ನಿಶಾನೆ ಆರ್–2 ಮತ್ತು 3 ನ್ನು ಕೆಲವು ಜನರ ಹಿತಾಸಕ್ತಿಗಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

8) ಮೈಸೂರು ಮಹಾನಗರ ಪಾಲಿಕೆಯಲ್ಲಿ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದವರ ಪೈಕಿ ಅರ್ಹರನ್ನು ಸಮಾನ ಕೆಲಸಕ್ಕೆ ಸಮಾನ ವೇತನ ಎಂದು ಪರಿಗಣಿಸಿ, 12.02.2012 ರಂದು ಸರ್ಕಾರ ಆದೇಶ ಹೊರಡಿಸಿರುತ್ತದೆ ಅಂದಿನಿಂದ ಸದರಿ ನೌಕರರನ್ನು "**ಸಮಾನ ಕೆಲಸಕ್ಕೆ ಸಮಾನ ವೇತನ ನೌಕರರೆಂದು**" ಎಂದು ಪರಿಗಣಿಸಲಾಗಿದೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. 12.02.2012 ನಂತರ ಮೈಸೂರು ಮಹಾನಗರ ಪಾಲಿಕೆಯಲ್ಲಿ ಯಾವುದೇ ದಿನಗೂಲಿ ನೌಕರರು ಇರುವುದಿಲ್ಲ ಎಂದರೆ ನನಗೆ ಮಾಹಿತಿ ಇರುವುದಿಲ್ಲ.

9) ಕೆಲವು ವ್ಯಕ್ತಿಗಳು ಮೈಸೂರು ಮಹಾನಗರ ಪಾಲಿಕಯ ಕಾರ್ಮಿಕರಲ್ಲದಿದ್ದರೂ ಸಹ , ಮೈಸೂರು ಮಹಾನಗರ ಪಾಲಿಕೆಯ ನೌಕರರೆಂದು ತೋರ್ಪಡಿಸಿಕೊಳ್ಳುವ ಸಲುವಾಗಿ ನಮ್ಮ ಇಲಾಖೆಗೆ ಸುಳ್ಳು ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ . ಸದರಿ ವ್ಯಕ್ತಿಗಳಿಗೆ ಅನುಕೂಲವಾಗಲಿ ಎಂದು ನಿಶಾನೆ ಆರ್ –2 ಮತ್ತು 3 ನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ . ನಿಶಾನೆ ಆರ್ – 3 ರಲ್ಲಿ ತೋರಿಸಲಾಗಿರುವ 33/43 ಜನರು ಎಂದೂ ಸಹ , ವಾಣಿ ವಿಲಾಸ್ ವಾಟರ್ ಸಪ್ಲೈ ಬೋರ್ಡ್ / ಮೈಸೂರು ಮಹಾನಗರ ಪಾಲಿಕೆಯ ನೌಕರರಾಗಿರಲಿಲ್ಲ ಎಂದರೆ ಸರಿಯಲ್ಲ .

10) ಈಗ ನನಗೆ ತೋರಿಸಲಾಗುತ್ತಿರುವ ನೀರು ಮತ್ತು ಒಳಚರಂಡಿ ಸಂಪರ್ಕದ ಬಳಕೆಯ ಬಿಲ್ ನಲ್ಲಿ ಮೈಸೂರು ಮಹಾನಗರ ಪಾಲಿಕೆ , ವಾಣಿ ವಿಲಾಸ ನೀರು ಸಬರಬರಾಜು ವಿಭಾಗ ಎಂಬ ಶಿರೋನಾಮೆ ಇರುತ್ತದೆ ಎಂದರೆ ಸರಿ , ಸಾಕ್ಷಿಯು ದಾಖಲೆಯನ್ನು ಒಪ್ಪಿಕೊಂಡಿದ್ದರಿಂದ ಅದನ್ನು **ನಿಶಾನೆ ಎ–4** ಎಂದು ಗುರುತಿಸಲಾಯಿತು.

11) ಮೈಸೂರು ಮಹಾನಗರ ಪಾಲಿಕೆ ಇ. ಎಸ್. ಐ. ವ್ಯಾಪ್ತಿಗೆ ಒಳಪಡುವುದಿಲ್ಲ ಎಂದರೆ ಸರಿಯಲ್ಲ . ವಾಣಿ ವಿಲಾಸ ನೀರು ಸರಬರಾಜು ಮಂಡಳಿ ಪ್ರತ್ಯೇಕ ಸಂಸ್ಥೆಯಾಗಿದ್ದು , ಇ.ಎಸ್.ಐ. ವ್ಯಾಪ್ತಿಗೆ ಒಳಪಡುತ್ತದೆ, ಮಹಾನಗರ ಪಾಲಿಕೆಯ ಅಧೀನದಲ್ಲಿ ಕೆಲಸ ಮಾಡುತ್ತಿರುವುದರಿಂದ , ಇ.ಎಸ್.ಐ. ವ್ಯಾಪ್ತಿಗೆ ಒಳಪಡುತ್ತದೆ.

12) ವಾಣಿ ವಿಲಾಸ ನೀರು ಸರಬರಾಜು ಮಂಡಳಿ ಹಾಗೂ ಮೈಸೂರು ಮಹಾನಗರ ಪಾಲಿಕೆ ಇ .ಎಸ್. ಐ. ವ್ಯಾಪ್ತಿಗೆ ಒಳಪಡುತ್ತದೆ ಎಂದು ತೋರಿಸಲು ಪ್ರತ್ಯೇಕ ಸರ್ಕಾರಿ ಆದೇಶಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ , ಆದರೆ ಇ. ಎಸ್. ಐ. ಕಾರ್ಯವ್ಯಾಪ್ತಿಯಲ್ಲಿ ಬರುತ್ತದೆ. ಅರ್ಜಿದಾರರು ಇ ಎಸ್ ಐ ವಂತಿಗೆಯನ್ನು ಪಾವತಿಸಲು ಭಾಧ್ಯಸ್ಥರಲ್ಲ ಎಂದರೆ ಸರಿಯಲ್ಲ . ನಿಶಾನೆ ಆರ್ –2 ರಲ್ಲಿ ತೋರಿಸಿರುವ 33/43 ಜನರು ಮೈಸೂರು ಮಹಾನಗರ ಪಾಲಿಕೆ ಅಡಿಯಲ್ಲಿ ಕೆಲಸ ಮಾಡುತ್ತಿರುವುದಿಲ್ಲ ಆದ್ದರಿಂದ ಇ ಎಸ್ ಐ ವಂತಿಗೆ ಪಾವತಿಸುವ ಸಂದರ್ಬ ಒದಗುವುದಿಲ್ಲ ಎಂದರೆ ಸರಿಯಲ್ಲ . ನಿಶಾನೆ ಆರ್–9 ರಂತೆ ಮಾಡಿರುವ ಆದೇಶ ಕಾನೂನುಬದ್ದವಾಗಿರುವುದಿಲ್ಲ ಮತ್ತು ಕಾನೂನಿನ ಅಡಿಯಲ್ಲಿ ಉರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ .
(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ನರಶಿಂಸಾ ಎಂ. ವಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.